## ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:ಹ.ಬ.ವಿವಾದ:58/2015-16 ದಿ: 07-09-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1. ಡಿ. ಗಂಗಾಧರ ತಂದೆ: ಡಿ. ಗಿರಿಯಪ್ಪ
   ತಾಳೂರು ಗ್ರಾಮ ಸಿರುಗುಪ್ಪ ತಾಲೂಕ
2. ನೀಲಕಂಠಪ್ಪ ತಂದೆ: ಯಂಕಪ್ಪ
   ತಾಳೂರು ಗ್ರಾಮ ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಗಾದಿಲಿಂಗಪ್ಪ ತಂದೆ: ತಿಮ್ಮಪ್ಪ
ಹಾಗಲೂರು ಗ್ರಾಮ ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ತಾಳೂರು | 72/A | 7-92 | H-45/2015-16 | 93/2015-16 |

ಪೀಠಿಕೆ:-

ಸಿರುಗುಪ್ಪ ತಾಲೂಕಿನ **ತಾಳೂರು ಗ್ರಾಮದ ಸ.ನಂ.72/A** ವಿಸ್ತೀರ್ಣ **7-92** ಎಕರೆ ಜಮೀನಿಗೆ ಸಂಭಂದಿಸಿದಂತೆ ಪಾಲು ವಿಭಾಗಪತ್ರ ಪ್ರಕಾರ ಗಾದಿಲಿಂಗಪ್ಪ, ಯಂಕೋಬಪ್ಪ ತಂದೆ: ತಿಮ್ಮಪ್ಪ ಇವರಿಂದ ಡಿ. ಗಂಗಾಧರ ತಂದೆ: ಡಿ. ಗಿರಿಯಪ್ಪ ನೀಲಕಂಠಪ್ಪ ತಂದೆ: ಯಂಕಪ್ಪ ಇವರ ಹೆಸರಿನಲ್ಲಿ ಖಾತೆಬದಲಾವಣೆ ಮಾಡಲು ನಮೂನೆ-21ನ್ನು ಪ್ರಚುರ ಪಡಿಸಲಾಗಿ. ನಿಗದಿತ ಅವಧಿಯೊಳಗೆ **ಟಿ.ಕೆ.ಗಾದಿಲಿಂಗಪ್ಪ ತಂದೆ: ತಿಮ್ಮಪ್ಪ ಹಾಗಲೂರು ಗ್ರಾಮ**, ಇವರು ದಿ: **06-11-2015 ರಂದು** ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **ದಿ:13-06-2016, 03-07-2016, 15-07-2016, 05-08-2016 ಮತ್ತು 19-08-2016** ರಂದು **ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳಾದ 1) ಡಿ.ಗಂಗಾಧರ ತಂದೆ: ಡಿ.ಗಿರಿಯಪ್ಪ 2) ನೀಲಕಂಠಪ್ಪ ತಂದೆ: ಯಂಕಪ್ಪ ತಾಳೂರು ಗ್ರಾಮ ಇವರು ತಾಳೂರು ಗ್ರಾಮದ ಸ.ನಂ.72/A ವಿಸ್ತೀರ್ಣ 7-92 ಎಕರೆ ಜಮೀನು ಪಿತ್ರಾರ್ಜಿತ ಆಸ್ತಿಯಾಗಿದ್ದು, ಸದರಿ ಆಸ್ತಿಯು ನಮ್ಮ ಭಾಗಕ್ಕೆ ಬಂದಿದ್ದು, ನಮ್ಮ ಹಕ್ಕು ಅಧೀನಾನುಭವದಲ್ಲಿರುತ್ತದೆ. ಈಗ ಸುಮಾರು ವರ್ಷಗಳಿಂದ ಸದರಿ ಆಸ್ತಿಯು ನಮ್ಮ ಸ್ವಾಧೀನಾನುಭವದಲ್ಲಿರುತ್ತದೆ. ಸದರಿ ಆಸ್ತಿಯು ಹಾಲಿ ಪಹಣಿಯಲ್ಲಿ ಗಾದಿಲಿಂಗಪ್ಪ, ಯಂಕೋಬಪ್ಪ ಇಬ್ಬರ ತಂದೆ ತಿಮ್ಮಪ್ಪ ಇವರ ಹೆಸರಿನಲ್ಲಿರುತ್ತದೆ. ಸದರಿ ಗಾದಿಲಿಂಗಪ್ಪ ಇವರ ಭಾಗಕ್ಕೆ ಹಾಗಲೂರು ಗ್ರಾಮದ ಜಮೀನು ಇವರ ಭಾಗಕ್ಕೆ ಹೋಗಿದ್ದು ಸದರಿ ಆಸ್ತಿಯು ನಮ್ಮ ಭಾಗಕ್ಕೆ ಬಂದಿದ್ದು ಸ್ವಾಧೀನಾನುಭವದಲ್ಲಿರುತ್ತದೆ. ಆದರೆ ಈಗ ವಿನಾಕಾರಣ ನಮಗೆ ತೊಂದರೆ ಕೊಡಬೇಕೆಂದು ಸದರಿ ಆಸ್ತಿಯನ್ನು ನಮ್ಮ ಹೆಸರಿಗೆ ವರ್ಗಾವಣೆಗೆ ನಾವು ಅರ್ಜಿಸಲ್ಲಿಸಿದಾಗ ದುರುದ್ದೇಶ ಪೂರ್ವಕವಾಗಿ ತಕರಾರು ಸಲ್ಲಿಸಿರುತ್ತಾರೆ. ಸದರಿ ಭೂಮಿಯಲ್ಲಿ ಅವರಿಗೆ ಯಾವುದೇ ರೀತಿಯಾಗಿ ಹಕ್ಕು ಭಾದ್ಯತೆಗಳು ಇರುವುದಿಲ್ಲ. ಈ ಮೊದಲು ನಮ್ಮ ಹೆಸರಿಗೆ ವರ್ಗಾವಣೆ ಮಾಡಿಸಿಕೊಳ್ಳಲು ನಮಗೆ ಒಪ್ಪಿಗೆ ಪತ್ರವನ್ನು ಸಹ ಬರೆದುಕೊಟ್ಟಿರುತ್ತಾರೆ. ತಕರಾರು ಅರ್ಜಿಯನ್ನು ಮನ್ನಣೆ ಮಾಡದೇ ಮೇಲ್ಕಾಣಿಸಿದ ಜಮೀನನ್ನು ನಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಲಿಖಿತ ಹೇಳಿಕೆ ದಿ: 19-08-2016 ರಂದು ನೀಡಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಗಾದಿಲಿಂಗಪ್ಪ ತಂದೆ: ತಿಮ್ಮಪ್ಪ ಲೇಟ್ ಹಾಗಲೂರು ಗ್ರಾಮ ಇವರು ತಾಳೂರು ಗ್ರಾಮದ ಸ.ನಂ.72/A ವಿಸ್ತೀರ್ಣ 7-92 ಎಕರೆ ಜಮೀನು ಡಿ. ಗಂಗಾಧರ ತಂದೆ: ಡಿ. ಗಿರಿಯಪ್ಪ ಮತ್ತು ನೀಲಕಂಠಪ್ಪ ತಂದೆ: ಯಂಕಪ್ಪ ಇವರು ವಿಭಾಗ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಸಂದರ್ಭದಲ್ಲಿ ನಾನು ದಿ:06-11-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತೇನೆ. ಸದ್ರಿ ಒಟ್ಟು ವಿಸ್ತೀರ್ಣ 7-92 ಸೆಂಟ್ಸ್ ಜಮೀನು ನನ್ನ ಮತ್ತು ನನ್ನ ಅಣ್ಣನಾದ ಯಂಕೋಬಪ್ಪ ಲೇಟ್ ಇವರ ಹೆಸರಿನಲ್ಲಿ ಜಂಟಿ ಪಟ್ಟ ಇದ್ದು ನಾವುಗಳು ಮೈನರ್‌ಗಳಾಗಿದ್ದ ಸಂದರ್ಭದಲ್ಲಿ ಬಳ್ಳಾರಿ ಉಪ ನೊಂದಣಿ ಕಛೇರಿ ಪತ್ರ ನಂ:949/72-73 ರಲ್ಲಿ ಖರೀದಿ ನೊಂದಣಿ ಹೊಂದಲಾಗಿರುತ್ತದೆ. ಆದ್ದರಿಂದ ಇದರಲ್ಲಿ ನನಗೆ ಅರ್ಧಹಿಸ್ಸಾಭಾಗ 3-96 ಸೆಂಟ್ಸ್ ಇರುತ್ತದೆ. ಕಾರಣ ನನ್ನ ಜಮೀನು ವಿಸ್ತೀರ್ಣ 3-96 ಸೆಂಟ್ಸ್ ಜಮೀನನ್ನು ನನ್ನ ಹೆಸರಿನಲ್ಲಿ ಉಳಿಸಿ, ಉಳಿದ ವಿಸ್ತೀರ್ಣ 3-96 ಸೆಂಟ್ಸ್ ಜಮೀನು ಮಾತ್ರ ಡಿ. ಗಂಗಾಧರ ತಂದೆ: ಡಿ.ಗಿರಿಯಪ್ಪ ಮತ್ತು ನೀಲಕಂಠಪ್ಪ ತಂದೆ: ಯಂಕಪ್ಪ ಇವರ ಜಂಟಿ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ, ವಿಚಾರಣೆ ಮಾಡಲಾಗಿ, ಸದರಿ ಜಮೀನು ಡಾಕ್ಯುಮೆಂಟ್ ಪತ್ರ ನಂ: 949/1972-73 ದಿ: 1-8-1976 ರ ಪ್ರಕಾರ ಹಾಗೂ ಇ.ಸಿ. ಪ್ರಕಾರ ಗಾದಿಲಿಂಗಪ್ಪ ತಂದೆ: ತಿಮ್ಮಪ್ಪ ಇವರಿಗೆ ಸ.ನಂ.72/A ವಿಸ್ತೀರ್ಣ 3-96 ಮತ್ತು ಪಾಲು ವಿಭಾಗ ಪ್ರಕಾರ ಸ.ನಂ.72/A ವಿಸ್ತೀರ್ಣ 3-96 ಸೆಂಟ್ಸ್ 1) ಡಿ. ಗಂಗಾಧರ ತಂದೆ: ಡಿ.ಗಿರಿಯಪ್ಪ 2) ನೀಲಕಂಠಪ್ಪ ತಂದೆ: ಯಂಕಪ್ಪ ಇವರ ಹೆಸರಿಗೆ ಜಂಟಿಯಾಗಿ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ತಾಳೂರು ಗ್ರಾಮದ ಸ.ನಂ.72/A ವಿಸ್ತೀರ್ಣ 7-92 ಎಕರೆ ಜಮೀನು, ಡಾಕ್ಯುಮೆಂಟ್ ಪತ್ರ ನಂ:949/1972-73 ದಿ:1-8-1976, ಹಾಗೂ ಇ.ಸಿ. ಪ್ರಕಾರ ಸ.ನಂ.72/A ವಿಸ್ತೀರ್ಣ 3-96 ಸೆಂಟ್ಸ್ ಗಾದಿಲಿಂಗಪ್ಪ ತಂದೆ: ತಿಮ್ಮಪ್ಪ ಇವರಿಗೆ ಮತ್ತು ಪಾಲುವಿಭಾಗಪತ್ರ ಪ್ರಕಾರ ಸ.ನಂ.72/A ವಿಸ್ತೀರ್ಣ 3-96 ಸೆಂಟ್ಸ್ ಜಮೀನು 1) ಡಿ.ಗಂಗಾಧರ ತಂದೆ: ಡಿ.ಗಿರಿಯಪ್ಪ 2) ನೀಲಕಂಠಪ್ಪ ತಂದೆ: ಯಂಕಪ್ಪ ಇವರಿಗೆ ಜಂಟಿಯಾಗಿ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 07 -09-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ತಹಸೀಲ್ದಾರರು
ನಾಡ ತಹಶೀಲ್ದಾರರು,
ಕರೂರು
ನಾಡ ಕಾರ್ಯಾಲಯ, ಕರೂರು
ಸಿರುಗುಪ್ಪ ತಾಲ್ಲೂಕು

ನಾಡ ಕಾರ್ಯಾಲಯ, ಕರೂರು, ಸಿರುಗುಪ್ಪ ತಾಲ್ಲೂಕು
ದಿ:........

ಇದರ ಪ್ರತಿಯನ್ನು:
1. ವಾದಿ ಹಾಗೂ ಪ್ರತಿವಾದಿಗಳು